**ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಸ್.ಜಿ.ಹೆಗಡೆಯವರಿಂದ,**

ನಾನು ಕಾರ್ಯದರ್ಶಿ ಆಗಿದ್ದ ಕಾಲಕ್ಕೆ ಸಹಕಾರಿಯಲ್ಲಿ 3 ಜನ ಕೆಲಸ ಮಾಡುತ್ತಿದ್ದರು. ಅವರಲ್ಲಿ ಇಬ್ಬರು ಖಾಯಂ ನೌಕರರು. ಒಬ್ಬರು ಹಂಗಾಮಿ ಗುತ್ತಿಗೆ ನೌಕರರು. ನಾನು ಸಂಘದಿಂದ ಹೊರಗೆ ಹೋಗಬೇಕಾದರೆ ನಾನು ಒಬ್ಬನೇ ಸಹಿ ಮಾಡಿ ನನ್ನ ಒಬ್ಬನ ಸಹಿ ಇರುವ ಚೆಕ್ ನ್ನು ಮಾತ್ರ ಸಿಬ್ಬಂದಿಯವರ ಕೈಗೆ ಕೊಟ್ಟು ಹೋಗುತ್ತಿದ್ದೆ. ನಾನು 2 ನೇ ಆರೋಪಿಗೆ ಚೆಕ್ ಕೊಡುವಾಗ ನನ್ನ ಸಹಿ ಮಾತ್ರವೇ ಇತ್ತು. ಅಧ್ಯಕ್ಷರ ಸಹಿ ಇರಲಿಲ್ಲ. ಸಂಘದ ಎಲ್ಲಾ ಸೀಲುಗಳು ಕಾರ್ಯದರ್ಶಿಯವರ ತಾಬಾ ಇರುತ್ತದೆ ಎಂದರೆ ಸರಿ. ಅಧ್ಯಕ್ಷರು ಕೇಳಿದರೆ ಅಧ್ಯಕ್ಷರ ಸೀಲನ್ನು ಅವರಿಗೆ ಕೊಡುತ್ತೇವೆ. ಅರೇಂಗಡಿಯ ಸೊಸೈಟಿಯಲ್ಲಿ ಸಿ ಸಿ ಟಿವಿ ಇದೆ ಎಂದರೆ ಸರಿ. ಸಂಘದ ಪ್ರತಿಯೊಂದು ವ್ಯವಹಾರಗಳು ಸಿ ಸಿ ಟಿವಿಯಲ್ಲಿ ರೆಕಾರ್ಡ ಆಗುತ್ತದೆ ಎಂದರೆ ಸರಿ. ಈ ಪ್ರಕರಣದ ವ್ಯವಹಾರದ ಸಿ ಸಿ ಟಿವಿ ಫೂಟೇಜನ್ನು ನಾನು ಒಂದು ಸಿ. ಡಿ. ಯಲ್ಲಿ ಸ್ಟೋರ್ ಮಾಡಿ ಸಂಘದ ಕಚೇರಿಯಲ್ಲಿ ಇರಿಸಿದ್ದೆ. ಪೊಲೀಸರು ನನ್ನನ್ನು ಯಾವುದೇ ಸಿ ಸಿ ಟಿವಿ ಫೂಟೇಜ್ ಕೇಳಿಲ್ಲ, ನಾನು ಯಾರಿಗೂ ಕೊಟ್ಟಿಲ್ಲ. ಸಂಘದ ಬ್ಯಾಂಕ್ ಖಾತೆ ಯಾರ ಮೊಬೈಲಿಗೂ ಲಿಂಕ್ ಆಗಿರುವುದಿಲ್ಲ. ಚೆಕ್ ನಾಪತ್ತೆ ಆದ ವಿಚಾರ ಗೊತ್ತಾದ ಕೂಡಲೇ ಈ ಬಗ್ಗೆ ಬ್ಯಾಂಕಿಗೆ ಮಾಹಿತಿ ಕೊಟ್ಟಿದ್ದೀರಾ ಎಂದರೆ ಸದರಿ ವಿಚಾರ ಗೊತ್ತಾಗಿದ್ದೆ ಬಹಳ ತಡವಾಗಿ. ಆ ವೇಳೆಗೆ ಚೆಕ್ ನಗದೀಕರಣ ಆಗಿರುತ್ತದೆ. ನಾನು ಈ ಬಗ್ಗೆ ಸಹಕಾರಿ ಅಭಿವೃದ್ದಿ ಅಧಿಕಾರಿಯವರಿಗೆ ಮಾಹಿತಿ ನೀಡಿದ್ದೇನೆ. ನಾನು ದಿನಾಂಕಃ 26-09-2016 ರಂದು ಹೊನ್ನಾವರಕ್ಕೆ ಬರುವ ಸಲುವಾಗಿ ಖಾತೆದಾರರು ಹಣ ಕೇಳಲು ಬಂದಾಗ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ನಾನು ಮತ್ತು ಕಚೇರಿಗೆಯಲ್ಲಿ ಲಭ್ಯವಿದ್ದ ಅಧ್ಯಕ್ಷರ ಸಹಿಯನ್ನು ಪಡೆದ 4 ಚೆಕ್ ಗಳನ್ನು 2 ನೇ ಆರೋಪಿಯ ಕೈಗೆ ಕೊಟ್ಟಿರುವುದಾಗಿ ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಡಿ. 6 ಎಂದು ಗುರುತಿಸಲಾಯಿತು. ನಿ.ಪಿ. 2 ರ ಚೆಕ್ ನ ಮೇಲೆ ಅಧ್ಯಕ್ಷರ ಸಹಿ ಯಾವಾಗ ಮಾಡಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಧ್ಯಕ್ಷರ ಸಹಿ ಮಾಡಲು ಯಾರು ಯಾವಾಗ ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. ಅಧ್ಯಕ್ಷರ ಸಹಿ ಆದ ನಂತರ ಅದನ್ನು ಯಾರಿಗೆ ಕೊಡಲಾಗಿದೆ ಎಂದು ನನಗೆ ಗೊತ್ತಿಲ್ಲ.

ಸೊಸೈಟಿಯಲ್ಲಿ ಸಿಮೆಂಟ್ ವ್ಯಾಪಾರ ನಡೆಯುತ್ತಿತ್ತು ಎಂದರೆ ಸರಿ. ಸಂಘದ ವ್ಯವಹಾರಕ್ಕೆ ಅಧ್ಯಕ್ಷರು ಬಹಳಷ್ಟು ಬಾರಿ ಹಣವನ್ನು ತಂದು ಕೊಟ್ಟಿರುತ್ತಾರೆ. ಅಧ್ಯಕ್ಷರು ಯಾರಿಂದ ಹಣ ತೆಗೆದುಕೊಂಡು ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿ ಸಂಘಕ್ಕೆ ವಾರ್ಷಿಕವಾಗಿ ಅಥವಾ 2 ವರ್ಷಕ್ಕೆ ಡೆಪೊಸಿಟ್ ಇಡುತ್ತಿದ್ದರು. ಆದರೆ ಸಂಘದ ವ್ಯವಹಾರಕ್ಕೆ ಎಂದು ಯಾವುದೇ ಹಣ ಇಡುತ್ತಿರಲಿಲ್ಲ.

ಬೆಳೆಸಾಲ ಪಡೆದ ರೈತರು ವಾಪಾಸ್ಸು ಕಟ್ಟದೇ ಇದ್ದಾಗ ನಿರ್ದೇಶಕರು ಸದರಿ ಹಣವನ್ನು ಸಂಘಕ್ಕೆ ಕಟ್ಟಿ ಬೆಳೆಸಾಲ ಬಂದ ನಂತರ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದರು ಎಂದರೆ ಅದು ಸರಿಯಲ್ಲ. ಆದರೆ ಅಧ್ಯಕ್ಷರು ಆ ರೀತಿ ಮಾಡುತ್ತಿದ್ದರು ಎನ್ನುತ್ತಾರೆ. ವ್ಯವಸಾಯ ಸಹಕಾರ ಸಂಘಗಳಲ್ಲಿ ಬೆಳೆಸಾಲ ಪಡೆದ

ರೈತರು ವಾಪಾಸ್ಸು ಕಟ್ಟದೇ ಇದ್ದಾಗ ನಿರ್ದೇಶಕರು ಸದರಿ ಹಣವನ್ನು ಸಂಘಕ್ಕೆ ಕಟ್ಟಿ ಬೆಳೆಸಾಲ ಬಂದ ನಂತರ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ ಎಂದರೆ ಅದು ಇರಬಹುದು ಎನ್ನುತ್ತಾರೆ. ನಿ.ಪಿ. 2 ರ ಚೆಕ್ ನ್ನು ಯಾರು ಯಾರಿಗೆ ಕೊಟ್ಟಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ, ನಾನು ನೋಡಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಡುವಾಗ ಪೊಲೀಸರು ನನಗೆ ಯಾವುದೇ ಚೆಕನ್ನು ತೋರಿಸಿಲ್ಲ ಮತ್ತು ಚೆಕ್ ನ ಮೇಲೆ ಅಧ್ಯಕ್ಷರ ಸಹಿ ಇರುವುದನ್ನು ನಾನು ಗುರುತಿಸಿರುವುದಿಲ್ಲ. ನಾನು 2 ನೇ ಆರೋಪಿಗೆ ಚೆಕ್ ಕೊಟ್ಟು ಹೋದ ನಂತರ ಆತ ಅದನ್ನು ಏನೂ ಮಾಡಿಕೊಂಡಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಅಧ್ಯಕ್ಷರನ್ನು ರಕ್ಷಿಸಲು 1 ಮತ್ತು 2 ನೇ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೊನ್ನಾವರಕ್ಕೆ ಕಾರ್ಯದ ನಿಮಿತ್ತ ಬಂದೇ ಇಲ್ಲ ಮತ್ತು ಯಾವುದೇ ಚೆಕ್ ನ್ನು 2 ನೇ ಆರೋಪಿಯ ಕೈಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹೊನ್ನಾವರಕ್ಕೆ ಬರುವಾಗ ಚೆಕ್ ಕೊಟ್ಟ ಬಗ್ಗೆ ಸಿ ಸಿ ಟಿ ವಿ ಫೂಟೇಜ್ ನ್ನು ಸಿ ಡಿ ಯಲ್ಲಿ ಸೇವ್ ಮಾಡಿ ಸಂಘದಲ್ಲಿ ಇಟ್ಟಿದ್ದೆ ಎನ್ನುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**